**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

***ಎಸ್.ಸಿ.* 116/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ **ರವಿಕಿರಣ** | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | ಃ **ಶಂಕರ** | **04.01.2023** |
| ವಯಸ್ಸು | ಃ **23** ವರ್ಷ | |
| ವೃತ್ತಿ | ಃ **ಖಾಸಗಿ ಕೆಲಸ** | **ಪಿಡಬ್ಲ್ಯೂ ಃ 06** |
| ವಾಸ ಸ್ಥಳ | ಃ **ಮೈಸೂರು** | **ಸಿಡಬ್ಲ್ಯೂ ಃ 06** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ಮೃತ ಚೆನ್ನಸ್ವಾಮಿ ಗೊತ್ತು. ಅವರು ಈಗ ಬದುಕಿಲ್ಲ. ಅವರು ಈಗ 3-4 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ಚಾಸಾ-4 ಮತ್ತು 5ರವರ ಪರಿಚಯ ಇದೆ. ನ್ಯಾಯಾಲಯದೆದುರು ಹಾಜರಿರುವ ಆರೋಪಿಗಳನ್ನು ನೋಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿಲ್ಲ. ನನ್ನ ರುಜು ನೋಡಿದರೆ ಗುರುತಿಸುತ್ತೇನೆ. ನೋಟಿಸ್‌ನಲ್ಲಿ ಸಾಕ್ಷಿ ತಮ್ಮ ರುಜು ಗುರುತಿಸಿದ್ದು, ಸಾಕ್ಷಿ ರುಜುವನ್ನು ನಿಪಿ-5(ಸಿ) ಎಂದು ಗುರುತಿಸಿದೆ. ಶವ ಪಂಚನಾಮೆಯಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಸಾಕ್ಷಿ ರುಜುವನ್ನು ನಿಪಿ-6(ಸಿ) ಎಂದು ಗುರುತಿಸಿದೆ. ಇವುಗಳಿಗೆ ನಜರಾಬಾದ್ ಪೊಲೀಸ ಠಾಣೆಯಲ್ಲಿ ರುಜು ಮಾಡಿರುತ್ತೇನೆ. ಇವುಗಳಲ್ಲಿ ಏನು ಬರೆದಿದೆ ಅಂತ ಗೊತ್ತಿಲ್ಲ. ಪೊಲೀಸರು ರುಜು ಮಾಡು ಎಂದಿದ್ದರಿಂದ ರುಜು ಮಾಡಿರುತ್ತೇನೆ.**

***(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)***

***ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-***

**2. ನಾನು ಪದವಿವರೆಗೆ ಓದಿದ್ದೇನೆ. ದಾಖಲೆಗಳಿಗೆ ರುಜು ಮಾಡುವಾಗ ಮಾಹಿತಿಗಳನ್ನು ತಿಳಿದು ರುಜು ಮಾಡುತ್ತೇನೆ. ಚೆನ್ನಸ್ವಾಮಿಯ ಶವ ಪಂಚನಾಮೆ ಸಮಯದಲ್ಲಿ ನಾನು ಹಾಜರಿದ್ದು ಶವ ಪಂಚನಾಮೆಗೆ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ಶವದ ಮೈಮೇಲೆ**

**ಗಾಯಗಳಾಗಿದ್ದನ್ನು ಪೊಲೀಸರು ತೋರಿಸಿದ್ದರು ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ ಮಾಹಿತಿಗಳನ್ನು ತಿಳಿದು ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**04.01.2023.**
**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**